ಧಾರ್ಮಿಕ ಸಾಹಿತ್ಯಕ ವೈಚಾರಿಕ ಬರಹಗಳ ತ್ರೈಮಾಸಿಕ

ಋಷಿ



# ತರಳಬಾಳು


ತರಳಬಾಳು ಪ್ರಕಾಶನ

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ

ಸಿರಿಗೆರೆ-೫೭೭ ೫೪೧ ಚಿತ್ರದುರ್ಗ ಜಿಲ್ಲೆ

ಸಂಪುಟ-೧೧

ಸಂಚಿಕೆ-೩

ಏಪ್ರಿ[illegible]

ವ್ಯಕ್ತಿ ಪರಿಚಯ

# ಡಾ|| ಸಿದ್ಧಯ್ಯ ಪುರಾಣಿಕ ಅವರು

---

ಹೀ ಚಿ ಶಾಂತವೀರಯ್ಯ

"ಫಲವಿತ್ತರೆಂಬಿ ಬಾಗುತ್ತದೆ, ಗೊನೆ ಹೊತ್ತ ಬಾಳೆ ಬಾಗುತ್ತದೆ, ತೆನೆ ಹೆತ್ತದಂಟು ಬಾಗುತ್ತದೆ, ಏನೇನೂ ಇಲ್ಲದುದು ಬೀಗುತ್ತದೆ ನೋಡಾ ಸ್ವತಂತ್ರ ಧೀರ ಸಿದ್ಧೇಶ್ವರಾ" ಇದು ಡಾ|| ಸಿದ್ಧಯ್ಯ ಪುರಾಣಿಕರ ವಚನ. 'ಪುರಾಣಿಕರು ಪ್ರತಿಭೆಯಿಂದ ಬಾಗಿದವರು, ಅನುಭಾವದಿಂದ ಬಾಗಿದವರು, ಕಾವ್ಯಪ್ರಚಯ ಪರಿಚಯದಿಂದ ಬಾಗಿದವರು, ಸತತ ಅಭ್ಯಾಸ ಪ್ರಯತ್ನದಿಂದ ಬಾಗಿದವರು, ವೃದ್ಧಸೇವಾನುರಾಗದಿಂದ ಬಾಗಿದವರು–ಹೀಗಾಗಿ ಬಾಗಿದ ತಲೆ ಮುಗಿದ ಕೈ ಮತ್ತು ತುಂಬಿದ ಹೃದಯದವರು ಡಾ|| ಸಿದ್ಧಯ್ಯ ಪುರಾಣಿಕರು. ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು ಎಂದು ಕುವೆಂಪುರವರು ಆಶೀರ್ವದಿಸಿದ್ದಾರೆ.

ಡಾ|| ಸಿದ್ಧಯ್ಯ ಪುರಾಣಿಕರ ವಂಶವೇ ಕವಿಗಳ ಮತ್ತು ಪುರಾಣಿಕರ ವಂಶ ದ್ಯಾಂಪುರದ ಕವಿರತ್ನ ಚನ್ನಪ್ಪ ಕವಿಗಳು ಇವರ ಅಜ್ಜಂದಿರು. ಪ್ರಸಿದ್ಧ ಪುರಾಣಿಕರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ಇವರ ತಂದೆ. ದ್ಯಾಂಪುರ ರಾಯಚೂರು ಜಿಲ್ಲೆಯ ಎಲಬುರ್ಗಿ ತಾಲ್ಲೂಕಿನ ಒಂದು ಸಣ್ಣ ಹಳ್ಳಿ. ಸುಮಾರು ನೂರು ಕುಟುಂಬಗಳಿರುವ ಊರು. ಅದು ಸುಸಂಸ್ಕೃತರ ಊರಾಗಿ ಆ ಊರಿನ ಅನುಭಾವಿಗಳು ಸುತ್ತೆಲ್ಲರಿಗೂ ಗುರುಗಳಾಗಿ ಶಿಕ್ಷಣ ಪ್ರಸಾರ ಮಾಡುತ್ತಿದ್ದರು. ಸಿದ್ಧಯ್ಯ ತುಂಬು ಸಂಸಾರದಲ್ಲಿ ಹುಟ್ಟಿದವರು. ಇಬ್ಬರು ತಮ್ಮಂದಿರು, ಇಬ್ಬರು ತಂಗಿಯರು. ಆಗರ್ಭ ಶ್ರೀಮಂತರೇನೂ ಅಲ್ಲ. ಆದರೆ ಹೊನ್ನಿನೊಳಗೊಂದು ಹೊರೆಯ, ವಸ್ತ್ರದೊಳಗೊಂದೆಳೆಯ, ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಎಂದು ಬಚ್ಚಿಟ್ಟವರಲ್ಲ. ಕಲ್ಲಿನಾಥ ಶಾಸ್ತ್ರಿಗಳು ಮಹಾಪಂಡಿತರಾಗಿದ್ದು ವೈದ್ಯವನ್ನೂ ಕಲಿತು ಕನ್ನಡ ಕಾವ್ಯಗಳನ್ನು ಲೀಲಾಜಾಲವಾಗಿ ಪ್ರವಚನ ಮಾಡಿ ಜನಪ್ರಿಯರಾಗಿದ್ದರು.



ಸಿದ್ಧಯ್ಯ ದ್ಯಾಂಪುರದಲ್ಲಿ ಹಳ್ಳಿ ಶಾಲೆಯನ್ನು ಮುಗಿಸಿ, ದೂರದ ಕುಕ್ನೂರಿಗೆ ನಡೆದುಕೊಂಡೇ ಹೋಗಿ ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಮಾಡಿದರು. ಒಮ್ಮೆ ಗುರುಗಳು ಎಲ್ಲಾ ವಿದ್ಯಾರ್ಥಿಗಳಿಗೂ ತಮಗೇನು ಬೇಕು ಎಂಬುದನ್ನು ಪಾಟಿಯಲ್ಲಿ ಬರೆದು ತೋರಿಸಿ ಎಂದಾಗ; ಕೆಲವರು ಪುಸ್ತಕ ಬೇಕು, ಪೆನ್ಸಿಲ್ ಬೇಕು, ಚೆಂಡು ಬೇಕು, ತಿಂಡಿ ಬೇಕು ಎಂದು ಬರೆದಿದ್ದರಂತೆ. ಆದರೆ ಸಿದ್ಧಯ್ಯ ಮಾತ್ರ ವಿದ್ಯೆ ಬೇಕೆಂದು ಬರೆದಿದ್ದರಂತೆ. ಬೆಳೆಯುವ ಕುಡಿ ಮೊಳಕೆಯಲ್ಲಿಯೇ ಎಂಬಂತೆ ಬಾಲ್ಯದಲ್ಲಿಯೇ ವಿದ್ಯೆಗೆ ಹಾತೊರೆಯುತ್ತಿದ್ದರು. ಏಳನೆಯ ತರಗತಿಯನ್ನು ಮುಗಿಸಿ ಕಲ್ಬುರ್ಗಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಂದು ಹಲವಾರು ಕಷ್ಟ–ನಷ್ಟಗಳನ್ನು ಅನುಭವಿಸಿ ತರಗತಿಯಲ್ಲಿ ಮೊದಲನೆಯವರಾಗಿ ಪದವಿ ಅಭ್ಯಾಸ ಮಾಡಿ, ಹೈದರಾಬಾದಿಗೆ ಹೋಗಿ ಬಿ.ಎ , ಎಲ್.ಎಲ್.ಬಿ ಪದವೀಧರರಾಗಿ ಜೀವನದಲ್ಲಿ ಒಂದು ಘಟ್ಟ ಮುಟ್ಟಿದರು.

ಸಿದ್ಧಯ್ಯ ಪುರಾಣಿಕರ ಜೀವನದ ಮೇಲೆ ಪ್ರಭಾವ ಬೀರಿದ ಮಹಾನುಭಾವರೆಂದರೆ–ಮಕ್ಕಳ ಸಾಹಿತ್ಯದ, ರತ್ನನ ಪದಗಳ, ಬೌದ್ಧ ಸಾಹಿತ್ಯದ ತ್ರಿವಿಕ್ರಮ ಜಿ. ಪಿ. ರಾಜರತ್ನಂ; ಬಹುಭಾಷಾ ಪರಿಣತಿಯ ಅಸೀಮಾ ಪಾಂಡಿತ್ಯದ, ಸರಸ ಸಜ್ಜನಿಕೆಯ ತೀ. ನಂ. ಶ್ರೀಕಂಠಯ್ಯ; ಹೊಸಗನ್ನಡ ಸಾಹಿತ್ಯದ ಆಚಾರ್ಯ ಪುರುಷ ಬಿ. ಎಂ. ಶ್ರೀಕಂಠಯ್ಯ; ಮಹಾಕವಿ ಕುವೆಂಪು. ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪುರವರ ಕನ್ನಡ ಕವನವನ್ನು ಕೇಳಿ ಕವಿಯಾಗಬೇಕೆಂಬ ಗುಂಗು ಅವರ ತಲೆಗೆ ಹತ್ತಿತು. ಹೈದರಾಬಾದಿನಲ್ಲಿ ನಡೆದ ಕವಿ ಸಮ್ಮೇಳನದಲ್ಲಿ 'ಎರಡು ಚಿತ್ರಗಳು' ಮತ್ತು 'ಮನ್ನಿಸೆನ್ನನು ಚೆನ್ನೆ' ಎಂಬ ಕವನಗಳನ್ನು ಮೊದಲಬಾರಿಗೆ ಓದಿದಾಗ ಕಾಲು ನಡುಗುತ್ತಿತ್ತು, ನಾಲಿಗೆ ತೊದಲುತ್ತಿತ್ತು. ಅಂದು ಉಪಸ್ಥಿತರಿದ್ದ ಮಾಸ್ತಿ, ಗೋಕಾಕ್, ಮೊದಲಾದ ಹಿರಿಯರು ಬೆನ್ನು ತಟ್ಟಿ ಕವಿತ್ವಕ್ಕೆ ನೀರೆರೆದರು. ತಂದೆಯವರಾದರೋ ಅಧಿಕಾರಿಯಾಗು ಇಲ್ಲ ವಕೀಲನಾಗು ಎಂದು ಹೇಳುತ್ತಿದ್ದರು. ಆದರೆ ಸಿದ್ಧಯ್ಯ ಇಂಗ್ಲೀಷ್, ಸಂಸ್ಕೃತ ಮತ್ತು ಕನ್ನಡ ಅಭ್ಯಾಸ ಮಾಡಿ ಇದೇ ವಿಶ್ವವಿದ್ಯಾನಿಲಯದಲ್ಲೇ ಮೊದಲನೆಯವರಾಗಿ ಉತ್ತೀರ್ಣರಾಗಿದ್ದರು. ಈ ಮಧ್ಯೆ ಅನೇಕ ಅಹಿತ ಘಟನೆಗಳು ಪುರಾಣಿಕರನ್ನು ಜರ್ಜರಿತಗೊಳಿಸಿದರೂ. ಅಧೀರರಾಗದೆ, ಎದೆಗುಂದದೆ ಗುರಿಮುಟ್ಟಲು ಛಲತೊಟ್ಟರು.

ಸಿದ್ಧಯ್ಯನವರಿಗೆ ತಹಶೀಲ್ದಾರ್ ಹುದ್ದೆ ಬಂದುದೇ ಒಂದು ಪವಾಡ. ಅಂದಿನ ಕಾಲದಲ್ಲಿ ಎಲ್ಲರ ಮನವನ್ನು ಸೆಳೆದಿದ್ದ ಹುದ್ದೆ ದೊರೆತುದುದು ಇವರ

ನಿಷ್ಠೆ, ಶ್ರದ್ಧೆ ಮತ್ತು ಶಿಸ್ತುಗಳಿಂದ. ಅಧಿಕಾರಿಗಳಾದ ಮೇಲೆ ಪುರಾಣಿಕರು ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಬಾಳಸಂಗಾತಿಯಾಗಿ ಗಿರಿಜಾದೇವಿಯನ್ನು ಹೊಂದಿದ ಮೇಲೆ ಕವಿ ಪುರಾಣಿಕರಿಗೆ ಪ್ರೇರಣೆ ಸಿಕ್ಕಿತು. ಸಾಹಿತ್ಯ ರಚನೆಗೆ ಪ್ರಾರಂಭ ಮಾಡಿ ಹಲವಾರು ಗ್ರಂಥಗಳನ್ನು ರಚಿಸಿದರು. ಸುಬೋಧಸಾರ (೧೯೩೯), ಆತ್ಮಾರ್ಪಣೆ (೧೯೪೨), ಶ್ರೀಕಾರ ಮತ್ತು ಪ್ರಬಂಧಮಾಲೆ (೧೯೫೨), ಜಲಪಾತ (೧೯೫೩), ಕರುಣಾ ಶ್ರಾವಣ (೧೯೫೩) ತುಷಾರಹಾರ (೧೯೫೬), ಪದ್ಯ ರತ್ನಾಕರ (೧೯೫೭), ಮಾನಸ ಸರೋವರ (೧೯೫೭), ಭಾರತವೀರ (೧೯೬೩), ಶರಣ ಚರಿತಾಮೃತ (೧೯೬೪), ಮಹಾತ್ಮ ಕಾಳಿದಾಸ ಪ್ರಶಸ್ತಿ (೧೯೬೧), ರಜತರೇಖೆ (೧೯೬೫), ಕಲ್ಪಲಮಾಲೆ (೧೯೬೮), ಶರಣ ಪ್ರಸಾದ (೧೯೬೯), ಮೊದಲು ಮಾನವನಾಗು (೧೯೬೯), ತುಪ್ಪ ರೊಟ್ಟಿ ಗೇ ಗೇ ಗೇ (೧೯೭೪), ಸಿದ್ಧರಾಮ (೧೯೭೪), ನಿರ್ಬಂಧನ (೧೯೭೪), ತ್ರಿಭುವನಮಲ್ಲ (೧೯೭೪), ಬಸವಣ್ಣನವರ ಜೀವನ ಹಾಗು ಸಂದೇಶ (೧೯೭೭), ವಚನೋದ್ಯಾನ (೧೯೭೭), ನಜೀರ್ ಅಕ್ಬರಾಬಾದಿ (೧೯೭೮), ಗಿಲ್ ಗಿಲ್ ಗಿಲಗಚ್ಚಿ (೧೯೭೮), ಹರ್ಡೇಕರ್ ಮಂಜಪ್ಪನವರು (೧೯೭೮), ಮಿರ್ಜಾ ಗಾಲಿಬ್ (೧೯೭೯), ವಚನ ನಂದನ (೧೯೮೩)–ಹೀಗೆ ಸುಮಾರು ಮುವತ್ತಕ್ಕೂ ಹೆಚ್ಚು ಕವನ, ಸಂಪಾದನೆ, ಕಿರುಗತೆ, ನಾಟಕ, ಜೀವನ ಚರಿತ್ರೆ ಮತ್ತು ಮಕ್ಕಳ ಪದಗಳನ್ನು ರಚಿಸಿದ್ದಾರೆ.

ತಹಶೀಲ್ದಾರರಾಗಿ ಸೇವೆಯನ್ನು ಪ್ರಾರಂಭಿಸಿದ ಪುರಾಣಿಕರು ಕರ್ನಾಟಕ ಏಕೀಕರಣವಾಗುವವರೆಗೂ ಹೈದರಾಬಾದ್ ಸಂಸ್ಥಾನದಲ್ಲಿ ಡೆಪ್ಯುಟಿ ಕಲೆಕ್ಟರಾಗಿದ್ದರು. ಇಲ್ಲಿಗೆ ಬಂದ ಮೇಲೆ ವಿದ್ಯೆ, ವಾರ್ತಾ ಮತ್ತು ಪ್ರವಾಸೋದ್ಯಮ, ಅರ್ಥ, ಸಾರಿಗೆ ಮತ್ತು ಕಾರ್ಮಿಕ ಇಲಾಖೆಗಳಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು. ದಕ್ಷ ಆಡಳಿತಗಾರರೂ, ನಿಷ್ಠಾವಂತ ವ್ಯಕ್ತಿಗಳೂ, ಶಿಸ್ತಿನ ಸಿಪಾಯಿಗಳೂ ಆದ ಸಿದ್ಧಯ್ಯನವರು ಒಳ್ಳೆಯದಕ್ಕೆ ಯಾವಾಗಲೂ ಸಿದ್ಧರಾಗಿರುತ್ತಿದ್ದರು. ನಿಜವಲ್ಲದ್ದನ್ನು ಖಂಡಿಸಿ, ಇದ್ದದ್ದನ್ನು ಇದ್ದಹಾಗೆ ಹೇಳುವ ಸಿದ್ಧರಾಮನ ಪರಮಭಕ್ತರು.

ಡಾ|| ಸಿದ್ಧಯ್ಯ ಪುರಾಣಿಕರಿಗೆ ಅರಮನೆ ಮತ್ತು ಜನಮನಗಳಿಂದ ನೂರಾರು ಸನ್ಮಾನ, ಪದವಿ ಪುರಸ್ಕಾರಗಳು ಲಭಿಸಿವೆ. ೧೯೭೭ ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿತು. ೧೯೭೮ ರಲ್ಲಿ ಇಡೀ ಭಾರತದಲ್ಲಿಯೇ ಮೊದಲನೆಯದಾಗಿ ಕಲ್ಕತ್ತಾದ ಭಾರತೀಯ ಭಾಷಾ ಪರಿಷತ್ತಿನ 'ಭಿಲ್ವಾರ' ಪ್ರಶಸ್ತಿ ಅವರ ವಚನೋದ್ಯಾನಕ್ಕೆ ಲಭಿಸಿತು. ೧೯೮೧ ರಲ್ಲಿ 'ಮಾಳವಾಡ' ಪ್ರಶಸ್ತಿ–ಹೀಗೆ ಪ್ರಶಸ್ತಿಗಳ ಮೇಲೆ ಪ್ರಶಸ್ತಿ, ಅಭಿನಂದನೆಗಳ ಮೇಲೆ ಅಭಿನಂದನೆಗಳು. ಕಾವ್ಯಾನಂದರ ೫೧ ನೆಯ ಹುಟ್ಟು ಹಬ್ಬಕ್ಕೆ ಕಾವ್ಯಾನಂದ, ಕಾವ್ಯಶ್ರೀ, ಜೀವನ ವಿಕಾಸ ಮೊದಲಾದ ಅಭಿನಂದನ ಗ್ರಂಥಗಳು ಪ್ರಕಟವಾದವು. ಬೆಂಗಳೂರಿನ ಸ್ನೇಹಿತರು ೧೯೮೧ ರಲ್ಲಿ ಕಾವ್ಯಾನಂದ ಮತ್ತು ಸಹೃದಯ ಎಂಬ ಅಭಿನಂದನಾ ಗ್ರಂಥಗಳನ್ನು ಅರ್ಪಿಸಿ ಗೌರವಿಸಿದರು.



ಸಿದ್ಧಯ್ಯ ಪುರಾಣಿಕರಿಗೆ ಮೊದಲಿನಿಂದಲೂ ಸಂಘ-ಸಂಸ್ಥೆ ಎಂದರೆ ಅಭಿಮಾನ. ನೂರಾರು ಸಂಘ-ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಇಂದಿಗೂ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ, ಬಸವ ಸಮಿತಿ ಮೊದಲಾದ ಸಂಘ ಸಂಸ್ಥೆಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಕನ್ನಡ ನಿಘಂಟಿನ ಸಂಪಾದಕ ಸಮಿತಿಯ ಸದಸ್ಯರಾಗಿ ಅವರ ಸೇವೆ ಸ್ಮರಣೀಯವಾದುದು. ಹೈದರಾಬಾದಿನಲ್ಲಿ ನಡೆದ ಪಂಚಭಾಷಾ ಕವಿ ಸಮ್ಮೇಳನದ ಅಧ್ಯಕ್ಷರಾಗಿ, ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷರಾಗಿ–ಹೀಗೆ ನೂರಾರು ಸಭೆ ಸಮಾರಂಭಗಳಲ್ಲಿ ತಮ್ಮ ವಿದ್ವತ್ತನ್ನು, ಸರಸ ಸಜ್ಜನಿಕೆಯನ್ನು ಪ್ರಕಟಿಸಿದ್ದಾರೆ. ೧೮-೮-೧೯೧೮ ಪುರಾಣಿಕರ ಜನ್ಮದಿನ. ೧೮-೮-೧೯೮೮ ಕ್ಕೆ ಸಪ್ತತಿ ಸಮಾರಂಭ.

ಸಿದ್ಧಯ್ಯ ಪುರಾಣಿಕರು ಆಲಮಟ್ಟಿಯಲ್ಲಿದ್ದಾಗ 'ಕಾವ್ಯಾನಂದ' ಎಂಬ ಕಾವ್ಯನಾಮ ಆಕಸ್ಮಿಕವಾಗಿ ಲಭ್ಯವಾಯಿತು. 'ಕಾವ್ಯದೇವಿ' ಎಂಬ ನೀಳ್ಗವಿತೆಯನ್ನು ಬರೆದು ಶರಣ ಸಂದೇಶದಲ್ಲಿ ಪ್ರಕಟವಾದಾಗ 'ನಿಸ್ನಾತ್ಮಾವಾನಂದ ನಸ್ನಾತ್ಮ ಕಾವ್ಯ ಇಂತು ಕಾವ್ಯಾನಂದ ನಾಮ ಸುಶ್ರಾವ್ಯ' ಅಂದಿನಿಂದಲೇ ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ'ರಾದರು.

ಡಾ|| ಸಿದ್ಧಯ್ಯ ಪುರಾಣಿಕರು ವಚನ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡ ಆಧುನಿಕ ವಚನಕಾರರು. 'ಸ್ವತಂತ್ರ ಧೀರ ಸಿದ್ಧೇಶ್ವರನ' ಸಾಕ್ಷಾತ್ಕಾರಕ್ಕೆ ಹಂಬಲಿಸಿದವರು. ಈ ಅಂಕಿತದಲ್ಲಿ ಸರಳ, ನೇರ ಮತ್ತು ಅನುಭವಪೂರ್ಣವಾದ ವಚನ ಶೈಲಿಯಲ್ಲಿ ವಚನಗಳನ್ನು ರಚಿಸಿದ್ದಾರೆ. ಅವು ಎಲ್ಲಿಯೂ ಆವೇಶದಿಂದ ಭೋರ್ಗರೆಯದೆ ಚಮತ್ಕಾರದಿಂದ ಪ್ರದರ್ಶಿತವಾಗದೆ ಅನುಭವ ವಾಹಕವಾಗುವಂತೆ ಸಹಜವಾದ ಧ್ವನಿಪೂರ್ಣವಾದ ಉಕ್ತಿಗಳು, ವಾಕ್ಯ ವಿನ್ಯಾಸಗಳು ಮೈವೆತ್ತು ವಚನಶಿಲ್ಪ ಸಹಜವಾಗಿ ರೂಪುಗೊಂಡಿದೆ. ಅನುಭವ ತುಂಬಿ ಬಂದಾಗ ಆಡಿದ ಮಾತೆಲ್ಲ ಕಾವ್ಯವಾಗುತ್ತದೆ ಎಂಬುದಕ್ಕೆ

ಪುರಾಣಿಕರ ವಚನಗಳೇ ಸಾಕ್ಷಿ. ವಚನೋದ್ಯಾನ, ವಚನನಂದನ ಈ ಮಾತಿಗೆ ಪುಷ್ಟಿ. ಡಾ|| ಸಿದ್ಧಯ್ಯ ಪುರಾಣಿಕರ' ಜೀವನ ಹೂವಿನ ಹಾಸಿಗೆಯೇನು ಆಗಿರಲಿಲ್ಲ. ಹಾಗೆಂದು ಮುಳ್ಳಿನ ಮಂಚವೂ ಆಗಿರಲಿಲ್ಲ. ಎಂದೂ ಕಷ್ಟವನ್ನು ಬೇಡಿದವರಲ್ಲ. ಆದರೆ ಕಷ್ಟ ಬಂದರೆ ಅದನ್ನು ಧೈರ್ಯದಿಂದ ಎದುರಿಸಿದ್ದಾರೆ. ಅದರಿಂದಲೇ ಅವರು ಸ್ವತಂತ್ರ ಧೀರ ಸಿದ್ಧೇಶ್ವರರಾದುದು.

ಪುರಾಣಿಕರೇ ತಿಳಿಸಿರುವಂತೆ : ವಿದ್ಯೆ ಬಂತು ವಿನಯ ಹೋಯ್ತು, ಬುದ್ಧಿ ಬಂತು ಶ್ರದ್ಧೆ ಹೋಯಿತು; ಸಂಮೃದ್ಧಿ ಬಂತು ಸಂಸ್ಕೃತಿ ಹೋಯಿತು ವಿಜ್ಞಾನ ಬಂತು ವಿನಾಶ ಆಯ್ತು, ಬೋಧನೆ ಬಂತು ಸಾಧನೆ ಹೋಯಿತು. ಮಾತು ಬಂತು ಕೃತಿ ಹೋಯಿತು, ಜಾತಿ ಬಂತು ಪ್ರೀತಿ ಹೋದ-ಈ ಕಾಲದಲ್ಲಿ ಸ್ವತಂತ್ರ ಧೀರ ಸಿದ್ಧೇಶನ ವಚನಗಳು ದಾರಿದೀವಿಗೆಯಂತಿವೆ. ಸಿರಿ ಹೆಚ್ಚಿದಂತೆ ಉರಿ ಹೆಚ್ಚು, ನೆನ್ನೆ ಕಡೆದ ಮಜ್ಜಿಗೆ ಇಂದು ಕಾಸಿದ ಹಾಲಿಗೆ ಹೆಪ್ಪು, ಓಣಿಗೊಬ್ಬ ಸನ್ಯಾಸಿ ಸನ್ಯಾಸಿಗೊಬ್ಬ ಊರ್ವಶಿ, ಮಾನವ ಕುಲದಲ್ಲಿ ಮಾನವತೆಯೇ ವಿರಳ ಕೆಟ್ಟದ್ದನ್ನು ಮಾಡುವುದು ಸುಲಭ ಬಿಡುವುದು ಕಷ್ಟ. ಅಗ್ನಿಶಾಮಕ ದಳಗಳು ಬಂದಿವೆ ದೋಷಾಗ್ನಿ ಶಮನ ದಳಗಳು ಬರುವುದು ಯಾವಾಗ? ಹೀಗೆ ಡಾ|| ಸಿದ್ಧಯ್ಯ ಪುರಾಣಿಕರು ಲೋಕಾನುಭವವನ್ನು ಚಿತ್ರಿಸಿದ್ದಾರೆ. ಡಾ|| ಸಿದ್ಧಯ್ಯ ಪುರಾಣಿಕರನ್ನು ನಾವು ಹೊಗಳಬೇಕಾಗಿಲ್ಲ ಅವರ ಮಾತೆ ಮಹಾತಾಯಿ ದಾನಮ್ಮನವರನ್ನು ಸ್ಮರಿಸಬೇಕು. ಎಳೆಮೆಯಲ್ಲಿಯೇ ಸಿದ್ಧಣ್ಣನಿಗೆ ಕಾವ್ಯಮಂ ರಚಿಸು, ಕತೆಯಂ ಕಟ್ಟು, ಜೀವನ ಚರಿತ್ರೆಯಂ ಬರೆ, ಸಿದ್ಧನಾಗು, ಸಾಧಕನಾಗು, ಶಿಸ್ತಿನ ಸಿಪಾಯಿಯಾಗು ಎಂದು ಹಾಲೂಡಿದ್ದರ ಪರಿಣಾಮವಾಗಿ ಡಾ|| ಸಿದ್ಧಯ್ಯ ಪುರಾಣಿಕರ ಹೆಸರು ಹಚ್ಚ ಹಸುರಾಗಿದೆ. ಅವರನ್ನು ಗುಲ್ಬರ್ಗದಲ್ಲಿ ನಡೆಯುವ ೫೮ ನೆಯ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಿ ಜನತೆ ತನ್ನನ್ನೇ ಗೌರವಿಸಿಕೊಂಡಿದೆ. ಕನ್ನಡಮ್ಮ ಇನ್ನೂ ಹೆಚ್ಚಿನ ಆಯುಷ್ಯ ಅಭಿವೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

●